ಆಗುತ್ತಿದ್ದವು. ನೀವು ಮಾತ್ರ ಕೇವಲ ೩ ಪುಸ್ತಕಗಳನ್ನು ಪ್ರಕಟಣೆ ಮಾಡಿದ್ದೀರಿ. ಅವುಗಳ ಬೆಲೆಯೂ ಜಾಸ್ತಿಯಾಗಿದೆ. ಕಡಿಮೆ ಬೆಲೆಗೆ ಹೆಚ್ಚಿನ ಪುಸ್ತಕಗಳನ್ನು, ಹಿಂದಿನ ಸರ್ಕಾರ ಪ್ರಕಟಣೆ ಮಾಡಿದ ರೀತ್ಯಾ, ನೀವೂ ಮಾಡುವ ಆಲೋಚನೆ ಇದೆಯೇ ?

ಶ್ರೀ ಜೀವರಾಜ ಆಳ್ವ — ಮಾನ್ಯ ಅಧ್ಯಕ್ಷರೇ, ೧೦೭ ಪುಸ್ತಕಗಳು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಹಿಂದಿನ ಸರ್ಕಾರದ ವತಿಯಿಂದ ಆದಂಥಾದ್ದು. ೫೦ ಪುಸ್ತಕಗಳೂ ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಪ್ರಕಟಣೆ ಮಾಡಿದ್ದು. ಈ ೫೦ ಪುಸ್ತಕಗಳು ಅಲ್ಲದೆ, ಈ ಮೂರು ಪುಸ್ತಕಗಳನ್ನೂ ಈ ವರ್ಷ ಪ್ರಕಟಣೆ ಮಾಡಿದೆ.

ಶ್ರೀ ಆರ್. ಎನ್. ನಾಯಕ್. — ಸರ್ಕಾರ ಕಡಿಮೆ ಬೆಲೆಗೆ ಪುಸ್ತಕ ಪ್ರಿಂಟ್ ಮಾಡಿಸಿ, ಜನರಿಗೆ ಅದರಿಂದ ಉಪಯೋಗವಾಗುವ ಹಾಗೆ ಮಾಡಬೇಕು. ಇದರಿಂದ ಸಾರ್ವಜನಿಕರಿಗೆ ಲಾಭವಾಗುತ್ತದೆ. ನೀವು ಪ್ರಕಟ ಮಾಡಿರುವ ಪುಸ್ತಕಗಳ ಬೆಲೆ ೬೫, ೧೬, ೨೦ ರೂಪಾಯಿಗಳಾಗಿದೆ. ಹಿಂದೆ ಕಡಿಮೆ ಬೆಲೆಗೆ ಪುಸ್ತಕಗಳು ಸಿಗುತ್ತಿತ್ತು. ಆದೇರೀತಿ ನೀವೂ ಕಡಿಮೆ ಬೆಲೆಗೆ ಪುಸ್ತಕ ಪ್ರಕಟ ಮಾಡಬೇಕೆಂದು ಸರ್ಕಾರದಲ್ಲಿ ಆಲೋಚನೆ ಇದೆಯೇ ? ಹಾಗೂ ೪೯೫ ರೂಪಾಯಿಗೆ ''ಚೆಲುವ ಕನ್ನಡ ನಾಡು'' ಪುಸ್ತಕವನ್ನು ಪ್ರಕಟ ಮಾಡಿದ್ದೀರಿ. ಇಷ್ಟು ಹಣಕ್ಕೆ ೪೯೫ ರೂಪಾಯಿಯಲ್ಲಿ ಎಷ್ಟೋ ಪುಸ್ತಕಗಳನ್ನು ಪ್ರಕಟ ಮಾಡಬಹುದಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕನ್ನಡ ಇಲ್ಲವೆಂದು ಹೇಳಿದ್ದೀರಿ. ತಪ್ಪು ದಾರಿಗೆ ಎಳೆಯುವಂತಾದ್ದಕ್ಕೆ ಕೈಹಾಕಬಾರದು. ಸಣ್ಣ ಸಣ್ಣ ಪುಸ್ತಕಗಳು ಮತ್ತು ಒಳ್ಳೆಯ ಲೇಖಕರಿಂದ ಬರೆದ ಪುಸ್ತಕಗಳನ್ನು ಪ್ರಕಟಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಜೀವರಾಜ ಆಳ್ವ. — ''ಚೆಲುವ ಕನ್ನಡ ನಾಡು'' ಪುಸ್ತಕದ ಬಗ್ಗೆ ಇಲಾಖಾ ಬೇಡಿಕೆಗಳಿಗೆ ಉತ್ತರಿಸುವ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪುರಂದರ ಸಾಹಿತ್ಯ ದರ್ಶನ ಪುಸ್ತಕವನ್ನು ಶಾಸನ ಸಭಾಸದಸ್ಯರೂ ನೋಡಿದ್ದಾರೆ, ನಾಲ್ಕು ಸಂಪುಟಗಳಿಗೆ ೬೫ ರೂಪಾಯಿ ಇಟ್ಟಿದ್ದೇವೆ. ೫೦ ಪುಸ್ತಕಗಳನ್ನು ಪ್ರಕಟ ಮಾಡಿರುವ ಬಗ್ಗೆ, ಇದು ಅಧಿಕಾರಿಗಳ ಮಟ್ಟದಲ್ಲಿ ಆಥವಾ ಮಂತ್ರಿಗಳ ಮಟ್ಟದಲ್ಲಿ ಆದಂತಹುಗಳಲ್ಲ. ಅವರ ಸಲಹೆಯನ್ನೂ ಸ್ವೀಕಾರ ಮಾಡಿಲ್ಲ. ಕರ್ನಾಟಕದ ಸುಮಾರು ೧೦೦ ಸಾಹಿತಿಗಳನ್ನು ಕರೆಸಿ, ಅವರ ಸಲಹೆಯಂತೆ ಈ ಪುಸ್ತಕಗಳನ್ನು ಮಾಡಲಾಗಿದೆ.

ಶ್ರೀ ಕೆ. ಬಿ. ಕೋಳಿವಾಡ. — ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಪಡಿಸಿರುವ ವಿಶ್ವಕೋಶದಲ್ಲಿ ಕೆಲವೊಂದು ಸಮಾಜಕ್ಕೆ ಹಾನಿಯಾಗತಕ್ಕಂಥ ವರ್ಣನೆಗಳಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ ? ಅದರಲ್ಲಿ ದೇವಾಂಗ ಸಮಾಜದ ಬಗ್ಗೆ, ಅನೇಕರು ಲಿಂಗಧಾರಿಗಳಲ್ಲ, ಪದ್ಮಶಾಲಿಗಳಲ್ಲ ಎಂಬಂತಕ್ಕಂಥ ಅವಮಾನ ರೀತಿಯಲ್ಲಿ ಬರೆದಿರುವುದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜೀವರಾಜ ಆಳ್ವ. — ಇದು ಮೂಲ ಪ್ರಶ್ನೆಗೆ ಬರದೇ ಹೋದರೂ ಕೂಡ, ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಕರೆಸಿ, ಆ ಭಾಗವನ್ನು ತೆಗೆದು ಹಾಕಬೇಕೆಂದು ಹೇಳಿದ್ದೇನೆ. ಈ ಕೆಲಸ ಆಗಿದೆಯೆಂದು ತಿಳಿದು ಕೊಂಡಿದ್ದೇನೆ.

ಮುಳಬಾಗಿಲಿನಲ್ಲಿ ಮೋಟಾರು ಒಂದನ್ನು ನಿರ್ಮಾಣ ಮಾಡುವುದು.

೧೫೮೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). — ಮಾನ್ಯ ವಾರ್ತಾ ಪ್ರಸಾರ, ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಿಂದ ತಿರುಪತಿ-ಮದ್ರಾಸ್ ಇತರೆ ಕಡೆಗೆ ಯಾತ್ರಾರ್ಥಿಗಳು ಮತ್ತು ಪ್ರವಾಸಿಗರು ದಿನ ನಿತ್ಯ ಸಾವಿರಾರು ಜನ ಓಡಾಡುವ ಮಾರ್ಗದಲ್ಲಿರುವ ಮುಳಬಾಗಿಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಯವರ 'ಹೋಟೆಲ್' ಒಂದನ್ನು ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜೀವರಾಜ ಆಳ್ವ (ವಾರ್ತಾ ಪ್ರಸಾರ, ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು) —

ಅ) ಮುಳಬಾಗಿಲಿನಲ್ಲಿ ಒಂದು ಹೆದ್ದಾರಿ ಸೌಲಭ್ಯವನ್ನು ಕೇಂದ್ರ ಸರ್ಕಾರವು ನಿರ್ಮಿಸಲು ಯೋಜನೆಯನ್ನು ಹಾಕಿಕೊಂಡಿರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಮಂಗಳಬಾಗಿಲಿನಲ್ಲಿ ಒಂದು ಹೆದ್ದಾರಿ ಸೌಲಭ್ಯವನ್ನು ಕೇಂದ್ರ ಸರ್ಕಾರವು ನಿರ್ಮಿಸಲು ಯೋಜನೆಯನ್ನು ಹಾಕಿಕೊಂಡಿರುತ್ತದೆಂದು ಹೇಳಿದ್ದೀರಿ ನಾನು ಮಂಗಳಬಾಗಿಲಿನಲ್ಲಿ ಹೋಟೆಲ್ ಒಂದನ್ನು ಸ್ಥಾಪಿಸಬೇಕೆಂದು ಕೇಳಿದ್ದೇನೆ. ತಾವು ಅದಕ್ಕೂ ಇದಕ್ಕೂ ಮಿಕ್ಸ್ ಮಾಡಬೇಡಿ. ನಮಗೆ ಈಗ ಸದ್ಯಕ್ಕೆ ಹೋಟೆಲ್ ಒಂದನ್ನು ಕೊಡಿ.

ಶ್ರೀ ಜೀವರಾಜ ಆಳ್ವ.— ಈ ಪಾಸ್ ಕೌಂಟರನ್ನು ನಿರ್ಮಿಸುವುದನ್ನು, ಈ ಕೆಲಸವನ್ನು ನಮ್ಮ ಇಲಾಖೆಯಿಂದಲೇ ಮಾಡಿಸುತ್ತೇನೆ. ಈ ಹೋಟೆಲ್ ಒಂದನ್ನು ನಿರ್ಮಿಸುವ ಕೆಲಸ ಕೇಂದ್ರ ಸರ್ಕಾರದ ಒಂದು ಸ್ಕೀಂನಲ್ಲಿ ಬರುವುದರಿಂದ ಅದು ಆಗಲೇ ಆಗುತ್ತದೆ.

ಕುಂದಾಪುರ ಕ್ಷೇತ್ರದ ಅವರ್ಸೆಯಲ್ಲಿ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಸಿಬ್ಬಂದಿಯ ಕೊರತೆಯ ಬಗ್ಗೆ.

೭೬೯. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಅವರ್ಸೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಮಂಜೂರಾದ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ ಬಲವೆಷ್ಟು ?

ಆ) ಅವರ್ಸೆ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕೊರತೆ ಇರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ, ಬಲವೆಷ್ಟು ?

ಇ) ಈ ಕೊರತೆಯನ್ನು ಎಂದು ನೀಗಲಾಗುವುದು ?

ಶ್ರೀ ಬಿ. ಡಿ. ಇನಾಂದಾರ್ (ಆರೋಗ್ಯ ಮಂತ್ರಿಗಳು).—

ಅ) ವೈದ್ಯಾಧಿಕಾರಿ	—	೧
ಫಾರ್ಮಾಸಿಸ್ಟ್	—	೧
ಕಿರಿಯ ಆರೋಗ್ಯ ಸಹಾಯಕಿ	—	೨
'ಡಿ' ವರ್ಗದ ನೌಕರರು	—	೨
		೬

ಆ) ಕಿರಿಯ ಆರೋಗ್ಯ ಸಹಾಯಕಿ — ೧

ಇ) ಆದಷ್ಟು ಜಾಗ್ರತೆ ತುಂಬಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಈ ಒಂದು ಹೇಳಿಕೆ ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ. ಈ ಒಂದು ಹೇಳಿಕೆ ಸಂಪೂರ್ಣವಾಗಿ ತಪ್ಪು ಎಂದು ಹೇಳಬಹುದು. ಏತಕ್ಕೆಂದರೆ ಈ ಒಂದು ಆಸ್ಪತ್ರೆಯನ್ನು ಪ್ರಾರಂಭ ಮಾಡಿದ ಲಾಗಾಯ್ತು ಇದುವರೆಗೂ ಯಾವ ಒಂದು ವೈದ್ಯಾಧಿಕಾರಿಯನ್ನೂ ನೇಮಕ ಮಾಡಿಲ್ಲ. ಒಂದು ವೇಳೆ ನೇಮಕ ಮಾಡಿದ್ದರೆ ಅದರ ತಾರೀಕನ್ನು ತಿಳಿಸುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.— ಮಾನ್ಯ ಅಧ್ಯಕ್ಷರೇ, ಈಪೊತ್ತು ಅಲ್ಲಿ ಮೆಡಿಕಲ್ ಆಫೀಸರ್ಸ್ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರ ಗಮನಕ್ಕೆ ತರಬೇಕಾದರೆ ದಿನಾಂಕ ೨೧-೧೧-೮೯ರಂದು ಅಲ್ಲಿಗೆ ಡಾಕ್ಟರ್ ರಾಘವೇಂದ್ರ ಹೆಬ್ಬಾರ್ ಅನ್ನುವವರನ್ನು ಪೋಸ್ಟ್ ಮಾಡಲಾಗಿದೆ,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಸ್ವಾಮಿ, ಮಾನ್ಯ ಮಂತ್ರಿಗಳು ಅಲ್ಲಿಗೆ ಡಾಕ್ಟರನ್ನು ಪೋಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಕೇಳುತ್ತೇನೆ. ಇವರು ಪೋಸ್ಟ್ ಮಾಡಿದ ತಕ್ಷಣ ಅವರು ಅಲ್ಲಿ ಇದ್ದಾರೋ ಇಲ್ಲವೋ ಎನ್ನುವುದನ್ನು ಏನಾದರೂ ಪರಿಶೀಲನೆ ಮಾಡಿದ್ದಾರೆಯೇ? ಅಲ್ಲಿಗೆ ಇನ್ನೂ ಯಾವ ವೈದ್ಯರೂ ಬಂದಿಲ್ಲ. ಆದುದರಿಂದ ಈಗಲಾದರೂ ತಾವು ಪರಿಶೀಲನೆ ಮಾಡುತ್ತೀರಾ ?